**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 223 ಟಿಎನ್ಆರ್ 2020 (ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 30.05.2020

# ಆದೇಶ

1. ಕೇಂದ್ರೀಯ ಗೃಹ ಮಂತ್ರಾಲಯವು ಆದೇಶ ಸಂಖ್ಯೆ 40-3 / 2020-ಡಿಎಂ-ಐ (ಎ), ದಿ. 24.03.2020, 14.04.2020 ಮತ್ತು 01.05.2020ಗಳಲ್ಲಿ ದೇಶದಲ್ಲಿ ಕೋವಿಡ್- 19 ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಲಾಕ್‌ಡೌನ್ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಇದರ ಪರಿಣಾಮವಾಗಿ, ರಾಜ್ಯ ಸರ್ಕಾರವು ರಾಜ್ಯಾದ್ಯಂತ ಕೋವಿಡ್-19 ಹರಡುವಿಕೆಯನ್ನು ನಿಯಂತ್ರಿಸಲು ಲಾಕ್‌ಡೌನ್ ಕ್ರಮಗಳ ಕುರಿತು ಆದೇಶ ಸಂಖ್ಯೆ ಕಂಇ 158 ಟಿಎನ್ಆರ್ 2020 ದಿ.25.03.2020, 22.04.2020, 02.05.2020 ಮತ್ತು 17.05.2020 ಗಳಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

2. ಕೋವಿಡ್-19 ಲಾಕ್‌ಡೌನ್ ಅವಧಿಯಲ್ಲಿ ಕೇಂದ್ರೀಯ ಗೃಹ ಮಂತ್ರಾಲಯದ ನಿರ್ದೇಶನದಂತೆ ಅಂತರ್ ರಾಜ್ಯ ವಲಸೆ ಕಾರ್ಮಿಕರನ್ನು ಮತ್ತು ಸಿಲುಕಿರುವ ವ್ಯಕ್ತಿಗಳನ್ನು ಶ್ರಮಿಕ ರೈಲು ಮೂಲಕ ಸ್ಥಳಾಂತರಿಸಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಅಂತರ್ ರಾಜ್ಯ ವಲಸೆ ಕಾರ್ಮಿಕರನ್ನು ಮತ್ತು ಸಿಲುಕಿರುವ ವ್ಯಕ್ತಿಗಳನ್ನು ಬಸ್ ಮುಖಾಂತರ ರೈಲ್ವೆ ನಿಲ್ದಾಣಕ್ಕೆ ತಲುಪಿಸಿ, ಅಲ್ಲಿಂದ ಶ್ರಮಿಕ ರೈಲ್ವೆ ಮುಖಾಂತರ ಸ್ವಂತ ರಾಜ್ಯಗಳಿಗೆ/ ಸ್ಥಳಗಳಿಗೆ ಪ್ರಯಾಣಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಅದರಂತೆ ಶ್ರಮಿಕ ರೈಲುಗಳ ಮೂಲಕ ಪ್ರಯಾಣಿಸುವ ವಲಸೆ ಕಾರ್ಮಿಕರನ್ನು ಮತ್ತು ಸಿಲುಕಿರುವ ವ್ಯಕ್ತಿಗಳ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲು ತೀರ್ಮಾನಿಸಿದೆ.

3. ಶ್ರಮಿಕ ರೈಲು ಸಂಚಾರ ಇರುವವರೆಗೆ ಅಥವಾ ದಿ.10.06.2020ರವರೆಗೆ, ಶ್ರಮಿಕ ರೈಲ್ವೆ ಪ್ರಯಾಣಕ್ಕೆ ತಗಲುವ ವೆಚ್ಚವನ್ನು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಯಿಂದ ನೇರವಾಗಿ ರೈಲ್ವೆ ಇಲಾಖೆಗೆ ಹಣವನ್ನು ಪಾವತಿಸಲಾಗುವುದು ಮತ್ತು ಅಂತರ್ ರಾಜ್ಯ ವಲಸೆ ಕಾರ್ಮಿಕರನ್ನು ಮತ್ತು ಸಿಲುಕಿರುವ ವ್ಯಕ್ತಿಗಳನ್ನು ವಿವಿಧ ಸ್ಥಳಗಳಿಂದ/ ಜಿಲ್ಲೆಯಿಂದ ರೈಲ್ವೆ ನಿಲ್ದಾಣಕ್ಕೆ ಬಿ.ಎಂ.ಟಿ.ಸಿ /ಕೆ.ಎಸ್.ಆರ್.ಟಿ.ಸಿ/ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ,/ಎನ್.ಇ.ಕೆ.ಆರ್.ಟಿ.ಸಿ. ಬಸ್ ಮೂಲಕ ಕರೆತಂದು ಶ್ರಮಿಕ ರೈಲು ಹತ್ತಿಸುವುದಕ್ಕೆ ತಗಲುವ ವೆಚ್ಚವನ್ನು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಯಿಂದ ನೇರವಾಗಿ ಸಂಬಂಧಪಟ್ಟ ಸಾರಿಗೆ ಸಂಸ್ಥೆಗಳಿಗೆ ಭರಿಸಲಾಗುವುದೆಂದು ಆದೇಶಿಸಿದೆ.

**(ಟಿ.ಕೆ.ಅನಿಲ್ ಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ರಾಜ್ಯ ಕಾರ್ಯಕಾರಿ ಸಮಿತಿ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.